# 25. ಹುರುಳಿ

ಹುರುಳಿ ಬೆಳೆಯು ನಮ್ಮ ರಾಜ್ಯದ ದಕ್ಷಿಣ ಪ್ರದೇಶದ ಜಿಲ್ಲೆಗಳಲ್ಲಿ ಪ್ರಮುಖ ದ್ವಿದಳ ಧಾನ್ಯಗಳಲ್ಲೊಂದಾಗಿದೆ. ಇದನ್ನು ಪೂರ್ಣ ಬೆಳೆಯಾಗಿಯೂ, ರಾಗಿ ಅಥವಾ ಇತರೆ ಬೆಳೆಗಳ ನಂತರ ಎರಡನೆ ಬೆಳೆಯಾಗಿಯೂ ಬೆಳೆಯಲಾಗುತ್ತದೆ. ಸುಲಭವಾಗಿ ಬೆಳೆಯಬಹುದಾದಂತಹ ಹುರುಳಿ ಶುಷ್ಕ ವಾತಾವರಣಕ್ಕೆ ಹೊಂದಿಕೊಂಡು ಅಧಿಕ ಇಳುವರಿ ನೀಡುತ್ತದೆ.

**ತಳಿಗಳು ಮತ್ತು ವಿಶೇಷ ಗುಣಗಳು**

| *ತಳಿಗಳು* | *ಬಿತ್ತನೆ ಕಾಲ* | *ಕಾಲಾವಧಿ (ದಿನಗಳು)* | *ಇಳುವರಿ (ಕ್ವಿಂ/ಎ)* | *ವಿಶೇಷ ಗುಣಗಳು* |
|---|---|---|---|---|
| ಕೆ.ಬಿ.ಹೆಚ್ 1 (ಬಿ.ಜಿ.ಎಂ 1) | ತಡವಾದ ಮುಂಗಾರು (ಆಗಸ್ಟ್ – ಸೆಪ್ಟೆಂಬರ್) | 90–100 | 3–4 | ದೀರ್ಘಾವಧಿ ತಳಿ, ಕಂದು ಬಣ್ಣದ ಬೀಜ ಹೊಂದಿದೆ |
| ಪಿ.ಹೆಚ್.ಜಿ 9 | | 100–105 | | ಹಳದಿ ನಂಜು ರೋಗಕ್ಕೆ ಸಹಿಷ್ಣುತೆ ಗುಣ ಹೊಂದಿದೆ |

**ಸೂಚನೆ :** ಆಗಸ್‌ನಲ್ಲಿ ಮುಂಚಿತವಾಗಿ ಬಿತ್ತನೆ ಮಾಡಿದಲ್ಲಿ ಹೆಚ್ಚು ಇಳುವರಿ ಪಡೆಯಬಹುದು

**ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಎಕರೆಗೆ)**

| *ಸಾಮಗ್ರಿಗಳು* | *ಪ್ರಮಾಣ* |
|---|---|
| ಬೀಜ (ಕಿ.ಗ್ರಾಂ) | 10 |
| **ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ)** | |
| ಸಾರಜನಕ | 10 |
| ರಂಜಕ | 15 |
| ಪೊಟ್ಯಾಷ್ | 10 |

**ಬಿತ್ತನೆ:** ಭೂಮಿ ಸಿದ್ಧವಾದ ಕೂಡಲೆ ಎಲ್ಲಾ ರಸಾಯನಿಕ ಗೊಬ್ಬರಗಳನ್ನು ಮಣ್ಣಿನಲ್ಲಿ ಸೇರಿಸಿ 12 ಅಂಗುಲ ಅಂತರದ ಸಾಲುಗಳಲ್ಲಿ 3 ರಿಂದ 4 ಅಂಗುಲ ಅಂತರದಲ್ಲಿ ಬೀಜವನ್ನು ಬಿತ್ತುವುದು. ಸಾಲಿನಲ್ಲೇ ಬಿತ್ತನೆ ಮಾಡುವುದರಿಂದ ಅಂತರ ಬೇಸಾಯ ಮಾಡಿ ಕಳೆ ನಿಯಂತ್ರಿಸಲು ಅನುಕೂಲವಾಗುತ್ತದೆ. ಕೈಯಲ್ಲಿ ಬೀಜ ಎರಚಿ ಬಿತ್ತನೆ ಮಾಡಿ ಬೆಳೆಯುವುದಕ್ಕಿಂತ ಎರಡು ಪಟ್ಟು ಇಳುವರಿಯನ್ನು ಪಡೆಯಬಹುದು. ದಕ್ಷಿಣ ಒಣಪ್ರದೇಶದಲ್ಲಿ ಆಗಸ್ಟ್ ತಿಂಗಳಿನಲ್ಲೇ ಬಿತ್ತನೆ ಮಾಡುವುದು. ತಡವಾದ ಬಿತ್ತನೆಯಿಂದ ಇಳುವರಿ ಕಡಿಮೆಯಾಗುತ್ತದೆ. ಮಣ್ಣು ಮತ್ತು ಹವಾಗುಣವನ್ನು ಅನುಸರಿಸಿ ಎರಡು ಬಾರಿ ಅಂತರ ಬೇಸಾಯ ಮಾಡುವುದು. ಕಳೆ ತೆಗೆಯುವುದರ ಕಡೆ ಗಮನ ಕೊಡುವುದು.

**ಸಸ್ಯ ಸಂರಕ್ಷಣೆ:** ಹುರುಳಿಯನ್ನು ತಡವಾಗಿ ಮುಂಗಾರಿನಲ್ಲಿ ಬೆಳೆದಾಗ ಬೂದಿರೋಗಕ್ಕೆ ತುತ್ತಾಗುವ ಸಾಧ್ಯತೆ ಇದೆ. ಎಲೆಗಳ ಮೇಲೆ ಬಿಳಿ ಬೂದಿ ಕಾಣಿಸಿಕೊಂಡ ಕೂಡಲೇ ಒಂದು ಲೀಟರ್ ನೀರಿನಲ್ಲಿ 0.5 ಮಿ.ಲೀ. ಕ್ಯಾಲಕ್ಸಿನ್ (ಶೇ.0.05) ಬೆರೆಸಿ ಸಿಂಪರಣೆ ಮಾಡುವುದರಿಂದ ಬೂದಿರೋಗವನ್ನು ನಿಯಂತ್ರಿಸಬಹುದು.

**ಮುಖ್ಯವಾದ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು:**

- ಸಾಲಿನಲ್ಲೇ ಬಿತ್ತನೆ ಮಾಡುವುದು. ಇದರಿಂದ ಅಂತರ ಬೇಸಾಯದಿಂದ ಕಳೆ ನಿಯಂತ್ರಣ ಮತ್ತು ಕೈಯಲ್ಲಿ ಬೀಜ ಎರಚಿ ಬಿತ್ತನೆ ಮಾಡಿ ಬಳೆಯುವುದಕ್ಕಿಂತ ಎರಡು ಪಟ್ಟು ಹೆಚ್ಚಿನ ಇಳುವರಿ ಪಡೆಯಬಹುದು.